## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 179 |
| 2 | ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| 4 | ಉತ್ತರಿಸಬೇಕಾದ ದಿನಾಂಕ | : | 16.07.2024. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವನ್ನು ಯಾವಾಗ ಸ್ಥಾಪಿಸಲಾಗಿದೆ; ಹಾಗೂ ಈ ನಿಗಮದ ಉದ್ದೇಶಗಳು ಯಾವುವು; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಮಾವು ಅಭಿವೃಧ್ಧಿ ಮತ್ತು ಮಾರುಕಟ್ಟೆ ನಿಗಮವನ್ನು 19-01-2011 ರಂದು ಸ್ಥಾಪಿಸಲಾಗಿದೆ. ನಿಗಮದ ಉದ್ದೇಶಗಳು ಈ ಕೆಳಕಂಡಂತಿವೆ.<br>• ದೇಶೀಯ ಮತ್ತು ರಫ್ತು ಮಾರುಕಟ್ಟೆ ಬೇಡಿಕೆಯಂತೆ ಉತ್ತಮ ಗುಣಮಟ್ಟದ ಮಾವಿನ ಹಣ್ಣುಗಳನ್ನು ಉತ್ಪಾದಿಸಲು ಮಾವು ಬೆಳೆಯನ್ನು ವೈಜ್ಞಾನಿಕ ರೀತಿಯಲ್ಲಿ ಬೆಳೆಯಲು ಉತ್ತೇಜಿಸುವುದು.<br>• ಮಾವು ಹಣ್ಣುಗಳ ಕೊಯ್ಲೋತ್ತರ ನಿರ್ವಹಣೆ ಮತ್ತು ಮಾರುಕಟ್ಟೆ ವಿಷಯಗಳಲ್ಲಿ ಮಾವು ಬೆಳೆಗಾರರಿಗೆ ಮತ್ತು ಮಾವು ಉದ್ಯಮಿಗಳಿಗೆ ಸಹಕರಿಸುವುದು.<br>• ಸಂಸ್ಕರಣೆ ಮತ್ತು ಮೌಲ್ಯಾಧಾರಿತ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.<br>• ಮಾವಿನ ಉತ್ಪಾದನೆ ಮತ್ತು ಮಾರುಕಟ್ಟೆ ವಿಷಯಗಳಲ್ಲಿ ಎಲ್ಲಾ ಬಾಧ್ಯಸ್ಥಗಾರರಿಗೆ (Stakeholders) ತರಬೇತಿ ನೀಡುವುದರ ಮೂಲಕ ಹೆಚ್ಚಿನ ವೈಜ್ಞಾನಿಕ ಜ್ಞಾನ, ವೃತ್ತಿಪರ ಕೌಶಲ್ಯಗಳನ್ನು ನೀಡುವುದು. |
| ಆ. | ರಾಜ್ಯದಲ್ಲಿ ಮಾವು ಬೆಳೆಗೆ ಗುರುತಿಸಿರುವ ಪ್ರದೇಶಗಳು ಯಾವುವು ಮತ್ತು ರಾಜ್ಯದಲ್ಲಿ ಪ್ರತಿವರ್ಷ ಬರುವ ಮಾವಿನ ಉತ್ಪಾದನೆ ಎಷ್ಟು; | ಸಾಂಪ್ರಾದಾಯಿಕವಾಗಿ ರಾಜ್ಯದಲ್ಲಿ ಮಾವು ಪ್ರಮುಖ ಹಣ್ಣಿನ ಬೆಳೆಯಾಗಿದ್ದು. ಮಾವು ಬೆಳೆಯನ್ನು ಪ್ರಮುಖವಾಗಿ ರಾಜ್ಯದ 24 ಜಿಲ್ಲೆಗಳಲ್ಲಿ ಎಂದರೆ ಕೋಲಾರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಧಾರವಾಡ, ಬೆಂಗಳೂರು ಗ್ರಾಮಾಂತರ, ಹಾವೇರಿ, ಶಿವಮೊಗ್ಗ, ಮೈಸೂರು, ಬೆಳಗಾವಿ, ಉತ್ತರ ಕನ್ನಡ, ಮಂಡ್ಯ, ಬೆಂಗಳೂರು ನಗರ, ಚಿಕ್ಕಮಗಳೂರು, ಕೊಪ್ಪಳ, ಚಿತ್ರದುರ್ಗ, ರಾಯಚೂರು, ಬೀದರ್, ದಾವಣಗೆರೆ, ಹಾಸನ, ಬಾಗಲಕೋಟೆ, ವಿಜಯನಗರ, ಚಾಮರಾಜನಗರ ಮತ್ತು ಗದಗ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಪ್ರತಿ ವರ್ಷ ಮಾವಿನ ಉತ್ಪಾದನೆ ಅಂದಾಜು 12 ರಿಂದ 14 ಮೆಟ್ರಿಕ್ ಟನ್ ಗಳಷ್ಟು. |
| ಇ | ರಾಜ್ಯದಲ್ಲಿನ ಮಾವು ಬೆಳೆಗಾರರಿಗೆ ಈ ನಿಗಮದಿಂದ ನೀಡುವ ಸೇವೆಗಳು ಮತ್ತು ಯೋಜನೆಗಳು ಯಾವುವು; ಇವುಗಳ ಅನುಷ್ಠಾನ ಯಾವ ಹಂತದಲ್ಲಿದೆ; | ರಾಜ್ಯದಲ್ಲಿ ಮಾವು ಬೆಳೆಗಾರರಿಗೆ ಈ ನಿಗಮದಿಂದ ನೀಡುವ ಸೇವೆಗಳು ಮತ್ತು ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ.<br>• ತರಬೇತಿ ಮತ್ತು ಪ್ರಾತ್ಯಕ್ಷತೆ ಆಯೋಜನೆ ಮೂಲಕ ಉತ್ತಮ ಕೃಷಿ ಪದ್ಧತಿ ಅಳವಡಿಕೆ ಗುಣಮಟ್ಟದ ಮಾವು ಉತ್ಪಾದನೆಗೆ ಕ್ರಮವಹಿಸಲಾಗುತ್ತಿದೆ. |

- ನಿರ್ವಹಣೆ, ಪ್ಯಾಕೇಜಿಂಗ್, ವರ್ಗೀಕರಣ ಮತ್ತು ಸಂಗ್ರಹಣೆಯಲ್ಲಿ ಉತ್ತಮ ಕ್ರಮಗಳ ಬಗ್ಗೆ ಬೆಳೆಗಾರರಿಗೆ ಜಾಗೃತಿ ಮೂಡಿಸಲಾಗುತ್ತಿದೆ.
- ನೇರ ಮಾರುಕಟ್ಟೆ ಮೇಳ ಮತ್ತು ಆನ್ ಲೈನ್ ಮಾರುಕಟ್ಟೆ ಉತ್ತೇಜನಕ್ಕೆ ನಿಗಮದ ವತಿಯಿಂದ ವೇದಿಕೆ ಕಲ್ಪಿಸಲಾಗಿದೆ.
- ವಸತಿ ಸಹಿತ ಮತ್ತು ಒಂದು ದಿನದ ತರಬೇತಿ ಪ್ರಾತ್ಯಕ್ಷತೆಗಳು/ಮಾವು ಬೆಳೆಗಾರರೊಂದಿಗೆ ಸಂವಾದ ಕಾರ್ಯಕ್ರಮಗಳ ಆಯೋಜನೆಗೆ ಹಾಗೂ ಅವಶ್ಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ಕೊಯ್ಲು ನಂತರದ ನಷ್ಟವನ್ನು ಕಡಿತಗೊಳಿಸುವಲ್ಲಿ ಹಾಗೂ ಕೊಯ್ಲು ನಂತರದಲ್ಲಿ ಸುಧಾರಿತ ನಿರ್ವಹಣೆ ಕ್ರಮಗಳನ್ನು ಅಳವಡಿಸಿಕೊಳ್ಳಲು ಅರಿವು ಮೂಡಿಸಲಾಗಿದೆ.
- ಎಥಿಲೀನ್ ಅನಿಲವನ್ನು ಬಳಸಿಕೊಂಡು ನೈಸರ್ಗಿಕ ಹಣ್ಣು ಮಾಗಿಸುವ ಪದ್ಧತಿ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ರಾಜ್ಯದ ಮಾವನ್ನು ರಾಷ್ಟ್ರೀಯ ಮತ್ತು ಅಂತ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲು **"ಕರ್ ಸಿರಿ"** ಟ್ರೇಡ್ ಮಾರ್ಕ್ ನೋಂದಾಯಿಸಲಾಗಿದೆ.
- ಮಾವು ವಿವಿಧ ಉತ್ಪನ್ನಗಳ ಸಂಸ್ಕರಣೆ ತರಬೇತಿಯನ್ನು ನೀಡಲಾಗುತ್ತಿದೆ.
- ಮಾವು ಬೆಳೆಗಾರರು ಹಾಗೂ ಖರೀಧಿದಾರರೊಂದಿಗೆ ನೇರ ಮಾರುಕಟ್ಟೆ ಸಂಪರ್ಕ ಸಮಾವೇಶ ಅಯೋಜನೆ.
- ಸ್ಥಳೀಯವಾಗಿ ಹಾಗೂ ರಫ್ತು ಮಾಡಲು ಅವಶ್ಯವಿರುವ ಅಪೇಡಾ ಮತ್ತು NPPQ ಅನುಮೋದಿತ ಪ್ಯಾಕ್ ಹೌಸ್ ಘಟಕವನ್ನು ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಮಾಡಿಕೆರೆಯಲ್ಲಿ ಮಾವು ಅಭಿವೃದ್ಧಿ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸಲಾಗಿದೆ.
- ಸಂಸ್ಕರಣೆ ಬಲವರ್ಧನೆಗೆ ಪಿಪಿಪಿ ಮಾದರಿಯಲ್ಲಿ ಮಾವು ಮತ್ತು ಇತರೆ ಬೆಳೆಗಳ ಸಂಸ್ಕರಣೆ ಘಟಕ ಸ್ಥಾಪನೆಗೆ ಕ್ರಮವಹಿಸಲಾಗಿದೆ.
- ಕಳೆದ 5 ವರ್ಷಗಳಿಂದ ವಿವಿಧ ಸೇವೆಗಳು ಮತ್ತು ಯೋಜನೆಗಳು ಅನುಷ್ಠಾನಗೊಳಿಸಲಾದ ವಿವರಗಳು ಈ ಕೆಳಗಿನಂತಿವೆ.

| **ಕ್ರಮ ಸಂ** | **ಕಾರ್ಯಕ್ರಮ** | **ಭೌತಿಕ ಸಂಖ್ಯೆ** | **ಆರ್ಥಿಕ (ರೂ. ಲಕ್ಷಗಳಲ್ಲಿ)** |
|---|---|---|---|
| 1 | ಫೆರಮೋನ್ ಟ್ರ್ಯಾಪ್ಸ್ ಉತ್ಪಾದನೆ ಹಾಗೂ ಸಹಾಯಧನ | 125 | 12.85 |
| 2 | ಮಾವು ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಒಂದು ದಿನದ | 12 | 6.20 |

<table>
<tr>
<td></td>
<td></td>
<td>
<table>
<tr><td></td><td>ತರಬೇತಿ</td><td></td><td></td></tr>
<tr><td>3</td><td>ಮಾವು ಉತ್ಪಾದನೆ ಹಾಗೂ ಕೀಟ/ರೋಗ ನಿಯಂತ್ರಣ ಕೈಪಿಡಿ ಹಾಗೂ ಕರಪತ್ರ/ಭಿತ್ತಿಪತ್ರ</td><td>500</td><td>1.25</td></tr>
<tr><td>4</td><td>ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಗೆ ಸಹಾಯಧನ</td><td>68</td><td>16.00</td></tr>
<tr><td>5</td><td>ಪ್ರಾತ್ಯಕ್ಷತೆ ತರಬೇತಿ</td><td>24</td><td>1.68</td></tr>
<tr><td>6</td><td>ಆನ್ ಲೈನ್ ಮಾರುಕಟ್ಟೆ</td><td>160</td><td>12.56</td></tr>
<tr><td>7</td><td>ಖರೀದಿದಾರರ ಮತ್ತು ಬೆಳೆಗಾರರ ಸಂಪರ್ಕ ಸಮಾವೇಶ</td><td>254</td><td>18.16</td></tr>
<tr><td>8</td><td>ಮಾವು ಮೇಳ ಮತ್ತು ನೇರ ಮಾರುಕಟ್ಟೆ</td><td>326</td><td>14.21</td></tr>
<tr><td>9</td><td>ಕಾರ್ಟೂನ್ ಬಾಕ್ಸ್ ಖರೀದಿಗೆ ಸಹಾಯಧನ</td><td>84</td><td>8.26</td></tr>
<tr><td>10</td><td>ಗ್ಲೋಬಲ್ ಗ್ಯಾಪ್ ಧೃಡಿಕರಣ ಕಾರ್ಯಕ್ರಮ</td><td>78</td><td>7..82</td></tr>
</table>
</td>
</tr>
<tr>
<td>ಈ</td>
<td>ರಾಜ್ಯ ಮತ್ತು ಕೇಂದ್ರ ಸರ್ಕಾರ ಈ ನಿಗಮಕ್ಕೆ ಕಳೆದ 3 ವರ್ಷಗಳಿಂದ ನೀಡಿರುವ ಅನುದಾನ ಎಷ್ಟು ಹಾಗೂ ಈ ಅನುದಾನವನ್ನು ಯಾವ ರೀತಿ ಬಳಸಲಾಗಿದೆ; (ಪೂರ್ಣ ಮಾಹಿತಿ ನೀಡುವುದು)</td>
<td>ಮಾವು ನಿಗಮಕ್ಕೆ ಕಳೆದ 3 ವರ್ಷಗಳಿಂದ ಎಂದರೆ 2021-22 ರಿಂದ 2023-24ರವರೆಗೆ ರಾಜ್ಯ ಸರ್ಕಾರದಿಂದ ರೂ.135.00 ಲಕ್ಷ ಮತ್ತು ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿ ರೂ.1000.00 ಲಕ್ಷ ಸೇರಿದಂತೆ ಒಟ್ಟಾರೆ ರೂ.1135.00 ಲಕ್ಷಗಳು ಅನುದಾನನ್ನು ನೀಡಲಾಗಿದೆ.<br>ಸದರಿ ಅನುದಾನವನ್ನು ಈ ಕೆಳಕಂಡಂತೆ ಕಾರ್ಯಕ್ರಮ ಅನುಷ್ಠಾನಕ್ಕೆ ಬಳಸಲಾಗಿದೆ;<br>1. ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿ ಮಾವು ಮತ್ತು ಇತರೆ ಉತ್ಪನ್ನಗಳ ಕೋಯ್ಲೋತ್ತರ ನಿರ್ವಹಣೆ ಪ್ರಾತ್ಯಕ್ಷತೆ ಘಟಕವನ್ನು ಕಟ್ಟಡ ನಿರ್ಮಾಣ ಅಗತ್ಯ ಯಂತ್ರೋಪಕರಣಗಳ ಹಾಗೂ ಮೂಲಭೂತ ಸೌಕರ್ಯಗಳೊಂದಿಗೆ ಸ್ಥಾಪನೆಗೆ.<br>2. ನೇರ ಮಾರುಕಟ್ಟೆ ಮತ್ತು ಆನ್ ಲೈನ್ ಮಾರುಕಟ್ಟೆ ಉತ್ತೇಜನಕ್ಕೆ, ತರಬೇತಿ ಮತ್ತು ಪ್ರಾತ್ಯಕ್ಷತೆ ಆಯೋಜನೆ ಮೂಲಕ ಉತ್ತಮ ಕೃಷಿ ಪದ್ಧತಿ ಅಳವಡಿಕೆಯಿಂದ ಗುಣಮಟ್ಟದ ಮಾವು ಉತ್ಪಾದನೆಗೆ.<br>3. ಮಾವು ಬೆಳೆಗಾರರು ಹಾಗೂ ಖರೀಧಿದಾರರೊಂದಿಗೆ ನೇರ ಮಾರುಕಟ್ಟೆ ಸಂಪರ್ಕ ಸಮಾವೇಶ ಅಯೋಜನೆಗೆ.</td>
</tr>
</table>

| | | |
|---|---|---|
| | | **4.** ಸಂಸ್ಕರಣೆ ಬಲವರ್ಧನೆಗೆ ಪಿಪಿಪಿ ಮಾದರಿಯಲಿ ಮಾವು ಮತ್ತು ಇತರೆ ಬೆಳೆಗಳ ಸಂಸ್ಕರಣೆ ಸ್ಥಾಪನೆಗೆ ವ್ಯವಹರಣ ಸಲಹೆಗಾರರ ಸೇವೆ ಪಡೆಯಲು.<br>**5.** ಮಾವು ಅಭಿವೃದ್ಧಿ ಕೇಂದ್ರ ಮಾಡಿಕೆರೆಯಲ್ಲಿ ಸ್ಥಾಪಿಸಲಾದ ಮಾವು ಸ್ಥಳೀಯವಾಗಿ ಹಾಗೂ ರಫ್ತು ಮೂಲ ಸೌಕರ್ಯಗಳ ನಿರ್ವಹಣೆ/ಬಲವರ್ಧನೆಗೆ. |
| ಉ | ರಾಜ್ಯದಲ್ಲಿ ಈ ನಿಗಮದಿಂದ ನಿರ್ವಹಿಸಲಾಗಿರುವ ಮಾವು ಸಂಸ್ಕರಣ ಘಟಕಗಳು ಯಾವುವು; ಅವುಗಳು ನಿರ್ವಹಿಸುತ್ತಿರುವ ಕಾರ್ಯಗಳು ಯಾವುವು; ರಾಜ್ಯದಲ್ಲಿ ಮಾವಿನ ಉತ್ಪಾದನೆಗೆ ಅನುಗುಣವಾಗಿ ಮಾವು ಸಂಸ್ಕರಣ ಘಟಕಗಳನ್ನು ಬೆಳೆಗಾರರ ಒತ್ತಾಯದಂತೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು? (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಮಾವು ನಿಗಮದ ವತಿಯಿಂದ ಯಾವುದೇ ಮಾವು ಸಂಸ್ಕರಣ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿರುವುದಿಲ್ಲ.<br>ಪಿಪಿಪಿ ಮಾದರಿಯಲ್ಲಿ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬೈರಾಪಟ್ಟಣದಲ್ಲಿ ಹಾಗೂ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನಲ್ಲಿ ಯಳವಟ್ಟಿಯಲ್ಲಿ ಮಾವು ಮತ್ತು ಇತರೆ ಹಣ್ಣುಗಳ ಸಂಸ್ಕರಣಾ ಘಟಕ ಸ್ಥಾಪಿಸಲು ಸಾದಕ ಬಾದಕ ಮತ್ತು ಪೂರಕ ಕ್ರಮಗಳ ಬಗ್ಗೆ ವರದಿ ನೀಡಲು ಹಾಗೂ ಅನುಷ್ಠಾನಕ್ಕೆ ವ್ಯವಹರಣ ಸಲಹೆಗಾರರ ಸೇವೆಯನ್ನು (Transaction Advisor) ಪಡೆಯಲಾಗುತ್ತಿದೆ .<br>ರಾಜ್ಯದಲ್ಲಿ ಮಾವಿನ ಉತ್ಪಾದನೆಗೆ ಅನುಗುಣವಾಗಿ ಮಾವು ಸಂಸ್ಕರಣ ಘಟಕಗಳನ್ನು ಬೆಳೆಗಾರರ ಒತ್ತಾಯದಂತೆ ಸ್ಥಾಪಿಸುವ ಉದ್ದೇಶದಿಂದ ಪಿಪಿಪಿ ಮಾದರಿಯಲ್ಲಿ ಸ್ಥಾಪನೆಗೆ ಹಂತ ಹಂತವಾಗಿ ಕ್ರಮಕೈಗೊಳ್ಳಲಾಗುತ್ತಿದೆ. |

HORTI 309 HGM 2024

S. S. Mallikarjun

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು

**ಎಸ್.ಎಸ್. ಮಲ್ಲಿಕಾರ್ಜುನ್**
**ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು**
**ಹಾಗೂ ದಾವಣಗೆರೆ ಜಿಲ್ಲೆ ಉಸ್ತುವಾರಿ ಸಚಿವರು**